ಸಂಪಾದಕೀಯ

# ಸ್ವಾತಂತ್ರ್ಯಾನ್ವೇಷಣೆ

## ಸ್ವಾತಂತ್ರ್ಯವೇ ಪರಮಗುರಿ

**ಎಲ್ಲರೂ** ಬಯಸುವುದು ಸ್ವಾತಂತ್ರ್ಯವನ್ನು. ಇದರ ಅಪೇಕ್ಷೆಯಿಂದಲೇ ಯೋಗಿ ತನ್ನ ಇಂದ್ರಿಯ ಮನಸ್ಸುಗಳನ್ನು ನಿಗ್ರಹಿಸುತ್ತಾನೆ, ಭೋಗಿಯು ಇಂದ್ರಿಯ ಮನಸ್ಸುಗಳನ್ನು ಸ್ವತಂತ್ರವಾಗಿ ಹರಿಯಬಿಡುತ್ತಾನೆ. ಈ ಸ್ವಾತಂತ್ರ್ಯದ ಬಯಕೆಯಿಂದಲೇ ವ್ಯಕ್ತಿಯು ಯಾವುದೇ ನೀತಿ ನಿಯಮಾವಳಿಗೆ ಬದ್ಧನಾಗದೆ, ಯಾವುದೇ ಶಿಸ್ತಿಗೂ ಒಳಗಾಗದೆ ಸ್ವಚ್ಛಂದ ವೃತ್ತಿಯಲ್ಲಿ ತೊಡಗುತ್ತಾನೆ, ಅನ್ಯಾಯ ಅತ್ಯಾಚಾರಗಳನ್ನು ಎಸಗುತ್ತಾನೆ, ಭಯೋತ್ಪಾದಕನಾಗುತ್ತಾನೆ, ಯಾವುದೇ ರೀತಿಯಲ್ಲಾದರೂ ಅಧಿಕಾರ ಹುದ್ದೆಗಳನ್ನು ಪಡೆಯಲು ತನ್ನೆಲ್ಲ ಪ್ರಯತ್ನ ಮಾಡುತ್ತಾನೆ ಮತ್ತು ಯಾವುದನ್ನೂ ಮಾಡದೆ "ಪ್ರಮಾದಾಲಸ್ಯನಿದ್ರೆ" ಗಳಿಂದ ಕೂಡಿದವನೂ ಆಗಿರುತ್ತಾನೆ. ಮತ್ತೆ ಎಲ್ಲವನ್ನೂ ತ್ಯಜಿಸಿ, ಇಂದ್ರಿಯ ಪ್ರಪಂಚದಿಂದ ದೂರವಾಗುವಂತೆ ವ್ಯಕ್ತಿಯನ್ನು ಪ್ರೇರೇಪಿಸುವುದೂ ಇದೇ ಸ್ವಾತಂತ್ರ್ಯದ ತುಡಿತವೇ.

'ದಾಸನಾಗಿ ಸ್ವರ್ಗದಲ್ಲಿ ವಾಸಿಸುವುದಕ್ಕಿಂತ ಸ್ವತಂತ್ರನಾಗಿ ನರಕದಲ್ಲಿರುವುದು ಲೇಸು'—ಇದು ಓರ್ವ ತತ್ತ್ವಜ್ಞಾನಿಯ ಮಾತು. ಸ್ವಾತಂತ್ರ್ಯವಿಲ್ಲದ ಸುಖ ಸುಖವೇ ಅಲ್ಲ. ತಿಳಿದೊ ತಿಳಿಯದೆಯೊ ಪ್ರತಿಯೊಂದು ಜೀವಿಯೂ ಸ್ವಾತಂತ್ರ್ಯವನ್ನು ಬಯಸುತ್ತದೆ. ಜೀವಿಯ ವಿಕಾಸ ಈ ಸ್ವಾತಂತ್ರ್ಯವನ್ನೇ ಅವಲಂಬಿಸಿದೆ. ಪ್ರಕೃತಿಯ ಶಕ್ತಿಯಿಂದ ಮುಕ್ತವಾಗುವ ಪ್ರಯತ್ನವೇ ವಿಕಾಸ. ಚೈತನ್ಯತತ್ತ್ವ ಪ್ರಕೃತಿಯಲ್ಲಿ ಎಲ್ಲೆಲ್ಲಿಯೂ ಅಂತರ್ನಿಹಿತವಾಗಿದೆ—ಅವ್ಯಕ್ತವಾಗಿದೆ. ಇದು ವ್ಯಕ್ತವಾಗಲು ಪ್ರಯತ್ನಿಸುತ್ತಿದೆ. ಹಂತಹಂತವಾಗಿ ಇದು ವ್ಯಕ್ತವಾಗುವುದೇ ವಿಕಾಸ. ಜಡವಸ್ತುಗಳಲ್ಲಿ ಇದು ಸಂಪೂರ್ಣ ಅವ್ಯಕ್ತವಾಗಿದೆ, ಸುಪ್ತವಾಗಿದೆ. ಜೀವಶಕ್ತಿಯಾಗಿ ಸಸ್ಯ ಮತ್ತು ಪ್ರಾಣಿಗಳಲ್ಲಿ ಇದು ಅಭಿವ್ಯಕ್ತವಾಗುತ್ತದೆ. ಮನುಷ್ಯರಲ್ಲಿ ಈ ಚೈತನ್ಯಶಕ್ತಿ ಇನ್ನೂ ಹೆಚ್ಚು ಪ್ರಕಾಶಗೊಳ್ಳುವುದು. ದೇವಮಾನವರಲ್ಲಿ, ಅವತಾರಪುರುಷರಲ್ಲಿ ಈ ದಿವ್ಯಶಕ್ತಿ ತನ್ನೆಲ್ಲ ವೈಭವದಿಂದ ವಿಜೃಂಭಿಸುವುದು, ಮುಕ್ತವಾಗಿ ಅಭಿವ್ಯಕ್ತಗೊಳ್ಳುವುದು.

ಪಾಶ್ಚಾತ್ಯ ತತ್ತ್ವಜ್ಞಾನಿ ಹೆಗೆಲ್ ಹೀಗೆ ಹೇಳುತ್ತಾನೆ: "ಪ್ರಪಂಚದ ಇತಿಹಾಸವೆಂಬುದು ಸ್ವಾತಂತ್ರ್ಯಪ್ರಜ್ಞೆಯ ವಿಕಾಸವಲ್ಲದೆ ಮತ್ತೇನೂ ಅಲ್ಲ." ಸ್ವಾಮಿ ವಿವೇಕಾನಂದರು ಇದನ್ನು ತಮ್ಮದೇ ಅನನುಕರಣೀಯವಾದ ಶೈಲಿಯಲ್ಲಿ ಹೇಳುತ್ತಾರೆ: "ಇಡೀ ಸಾಮಾಜಿಕ ಜೀವನವೇ ಈ ಒಂದು ಸ್ವಾತಂತ್ರ್ಯತತ್ತ್ವದ ಪ್ರತಿಪಾದನೆ—ಎಲ್ಲ ಚಲನೆಯೂ ಕೂಡ ಸ್ವಾತಂತ್ರ್ಯದ ಉನ್ಮುಖವೇ .... ನಾವೆಲ್ಲರೂ ಈ ಸ್ವಾತಂತ್ರ್ಯದೆಡೆಗೆ ಮುನ್ನುಗ್ಗುತ್ತಿದ್ದೇವೆ. ನಾವೆಲ್ಲ, ತಿಳಿದೊ ತಿಳಿಯದೆಯೊ, ಆ ಧ್ವನಿಯನ್ನು ಅನುಸರಿಸುತ್ತಿದ್ದೇವೆ. ಮುರಳಿವಾದಕನ ಸಂಗೀತಕ್ಕೆ ಮನಸೋತು ಹಳ್ಳಿಯ ಮಕ್ಕಳು ಅದನ್ನು ಅನುಸರಿಸಿದಂತೆ ನಾವೆಲ್ಲರೂ ಮುಕ್ತಿಯ ಮಧುರ ಧ್ವನಿಯನ್ನು ಅರಸಿಕೊಂಡು ಹೋಗುತ್ತಿದ್ದೇವೆ" (ಕೃತಿಶ್ರೇಣಿ, ೨.೬೫. ಆದ್ದರಿಂದ ನಮ್ಮ ಜೀವನದ ಗುರಿಯೇ ಮುಕ್ತಿ, ಮತ್ತು ಎಲ್ಲ ಧರ್ಮಗಳೂ ಅದಕ್ಕಿರುವ ಮಾರ್ಗಗಳು.

## ವ್ಯಕ್ತಿ ಸ್ವಾತಂತ್ರ್ಯ

ಹಿಂದೆ ಸಮಾಜ ವ್ಯವಸ್ಥಿತವಾಗಿತ್ತು, ಒಂದು ನಿರ್ದಿಷ್ಟವಾದ ಸ್ವರೂಪವನ್ನು ಪಡೆದಿತ್ತು. ಸಮಾಜದ ವಿವಿಧ ಅಂಗಗಳು ತಮ್ಮದೇ ಆದ ಪ್ರತ್ಯೇಕ ಅಸ್ತಿತ್ವವನ್ನು ಪಡೆದಿದ್ದವು. ಧಾರ್ಮಿಕ, ಜಾತೀಯ, ಔದ್ಯೋಗಿಕ ಮತ್ತು ಇತರ ಗುಂಪುಗಳು ತಮ್ಮ ತಮ್ಮ ಸೀಮಿತ ಪರಿಧಿಯೊಳಗೆ ಕೆಲಸ ಮಾಡುತ್ತಿದ್ದವು. ಪ್ರತಿಯೊಬ್ಬ ವ್ಯಕ್ತಿಯೂ ಯಾವುದಾದರೂ ಗುಂಪಿಗೆ ಸೇರಿದವನಾಗಿದ್ದ, ಆ ಗುಂಪಿನ ನೀತಿ ನಿಯಮಾವಳಿಗೆ ಬದ್ಧನಾಗಿದ್ದ. ಆ ಗುಂಪಿನ ಪರಿಧಿಯ ಒಳಗೆ ಅವನಿಗೆ ಸ್ವಲ್ಪ ಸ್ವಾತಂತ್ರ್ಯವಿದ್ದರೂ, ಅವನಿಗೆ ನಿಜವಾದ ವ್ಯಕ್ತಿ ಸ್ವಾತಂತ್ರ್ಯವಿರಲಿಲ್ಲ. ಅವನ ವ್ಯಕ್ತಿತ್ವ ಆ ಗುಂಪಿನೊಡನೆ ಒಂದಾಗಿತ್ತು, ತನ್ನದೇ ಆದ ವ್ಯಕ್ತಿತ್ವ ಅವನಿಗಿರಲಿಲ್ಲ. ಅವನು ವೈಷ್ಣವನೊ, ಶೈವನೊ, ಬೌದ್ಧನೊ, ಕ್ರಿಶ್ಚಿಯನ್ನನೊ ಅಥವಾ ಮುಸ್ಲಿಮನೊ ಆಗಿದ್ದ; ಬ್ರಾಹ್ಮಣನೊ, ಕ್ಷತ್ರಿಯನೊ ಅಥವಾ ಇನ್ನಾವುದೊ ಜಾತಿಯವನಾಗಿದ್ದ; ಹಾಗೆಯೇ ಬಡಗಿಯೊ, ರೈತನೊ, ವ್ಯಾಪಾರಿಯೊ ಆಗಿ ಯಾವುದಾದರೂ ಔದ್ಯೋಗಿಕ ಗುಂಪಿಗೆ ಸೇರಿದ್ದ. ಈ ಗುಂಪಿನಿಂದ ಹೊರಗೆ ಅವನಿಗೆ ಯಾವ ವ್ಯಕ್ತಿತ್ವವೂ (*individuality*) ಇರಲಿಲ್ಲ. ಆದರೆ ಆ ಗುಂಪಿನೊಳಗೆ ಅವನಿಗೆ ಸಾಕಷ್ಟು ಸುಭದ್ರತೆಯಿತ್ತು.

ಆದರೆ ಕ್ರಮೇಣ ಸಮಾಜದ ಸ್ವರೂಪ ಬದಲಾಯಿತು—ಈ ಎಲ್ಲ ಗುಂಪುಗಳು ಸಡಿಲವಾಗತೊಡಗಿದವು. ಮನುಷ್ಯ ಅವುಗಳ ಸರಪಳಿಯಿಂದ ಹೊರಬರತೊಡಗಿದ, ಎಲ್ಲ ಸಾಂಪ್ರದಾಯಿಕ ಕಟ್ಟುನಿಟ್ಟುಗಳಿಂದ ದೂರವಾಗತೊಡಗಿದ. ಅಂದರೆ ಇಂದು ಮನುಷ್ಯ ಹೆಚ್ಚು ಸ್ವತಂತ್ರನಾಗಿದ್ದಾನೆ. ಆದರೆ ಈ ಸ್ವಾತಂತ್ರ್ಯದೊಡನೆ ಅವನು ತನ್ನದೇ ಆದ ವ್ಯಕ್ತಿತ್ವವನ್ನು ಬೆಳಸಿಕೊಂಡಿಲ್ಲ. ಅವನು ಸ್ವತಂತ್ರನಾದ, ಆದರೆ ವ್ಯಕ್ತಿಯಾಗಲಿಲ್ಲ—(He is independent but not an indi-

> **ಮಂಡಿಯೂರಿ ಮೊಳಕಾಲಮೇಲೆ ನಾವು ಜೀವಿಸುವುದಕ್ಕಿಂತ ನಮ್ಮ ಕಾಲಮೇಲೆ ನಿಂತು ಸಾಯುವುದು ಲೇಸು.**
>
> — **ಫ್ರಾಂಕ್ಲಿನ್ ರೂಸ್‌ವೆಲ್ಟ್** (Franklin Roosevelt)

vidual). ಅವನ ಸ್ವಾತಂತ್ರ್ಯ ಅವನನ್ನು ಅತಂತ್ರನನ್ನಾಗಿಸಿದೆ. ಅವನು ಮೊದಲಿನ ಸುಭದ್ರತೆಯನ್ನು ಕಳೆದುಕೊಂಡು ಶಕ್ತಿಹೀನತೆಯನ್ನೂ ಜೀವನದ ಅರ್ಥಹೀನತೆಯನ್ನೂ ಅನುಭವಿಸುತ್ತಿದ್ದಾನೆ, ಮತ್ತು ಒಂಟಿತನದಿಂದ ತೊಳಲುತ್ತಿದ್ದಾನೆ. ಕತ್ತರಿಸಿಹಾಕಿದ ಗಿಡದ ರೆಂಬೆಯಂತಾಗಿದ್ದಾನೆ. ಗಿಡದ ಆಶ್ರಯವೂ ಇಲ್ಲ, ತಾನೇ ನೆಲದಲ್ಲಿ ಬೇರು ಬಿಟ್ಟಿಲ್ಲ. ಹಾಗೆಯೇ ಮನುಷ್ಯ, ಸಮಾಜದ ಯಾವ ಗುಂಪಿನ ಆಶ್ರಯವೂ ಇಲ್ಲದೆ ತನ್ನ ವ್ಯಕ್ತಿತ್ವದಲ್ಲೂ ತಾನು ನೆಲೆನಿಲ್ಲದೆ ಪರದಾಡುತ್ತಿದ್ದಾನೆ.

## ಸ್ವಾತಂತ್ರ್ಯ ಮತ್ತು ಜವಾಬ್ದಾರಿ

ಸ್ವಾತಂತ್ರ್ಯ ವೈಯಕ್ತಿಕ ಜವಾಬ್ದಾರಿಯನ್ನು ಸೂಚಿಸುತ್ತದೆ. ಸ್ವತಂತ್ರ ವ್ಯಕ್ತಿ ತನ್ನ ಮೇಲಿನ ಜವಾಬ್ದಾರಿಯನ್ನು ತಾನೇ ಹೊತ್ತುಕೊಳ್ಳಬೇಕು, ತನಗೆ ತಾನೇ ಹೊಣೆಯಾಗಿರಬೇಕು. ತನ್ನ ಕಷ್ಟನಷ್ಟಗಳಿಗಾಗಿ ಯಾವಾಗಲೂ ಇತರರನ್ನೂ ಬಾಹ್ಯ ಸನ್ನಿವೇಶಗಳನ್ನೂ ದೂರುವ ಮತ್ತು ದೂಷಿಸುವ ವ್ಯಕ್ತಿ ನಿಜವಾಗಿ ಸ್ವತಂತ್ರನಲ್ಲ. ತನ್ನ ಸುಖನೆಮ್ಮದಿಗಳಿಗಾಗಿ ಯಾವಾಗಲೂ ಇತರರನ್ನೂ ಬಾಹ್ಯ ಸನ್ನಿವೇಶಗಳನ್ನೂ ಅವಲಂಬಿಸುವವನು ನಿಜವಾಗಿ ಸ್ವತಂತ್ರನಲ್ಲ. ತಾನು ಏನೇ ಮಾಡಿದರೂ ಅದರ ಸಂಪೂರ್ಣ ಹೊಣೆಯನ್ನು ತಾನೇ ಹೊತ್ತುಕೊಳ್ಳುವ ಧೈರ್ಯವನ್ನು ವ್ಯಕ್ತಿ ಪಡೆದಿರಬೇಕು ; ತನಗೇನುಂಟಾದರೂ ಅದೂ ಕೂಡ ತನ್ನದೇ ಕರ್ಮದ ಫಲವೆಂದು ಸ್ವೀಕರಿಸುವ ಧೋರಣೆ ಅವನಿಗಿರಬೇಕು. ಆಗಲೇ ಅವನು ನಿಜವಾಗಿ ಸ್ವತಂತ್ರ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ : "ನಾವೇ ಎಲ್ಲಕ್ಕೂ ಹೊಣೆಗಾರರಾದಾಗ ಮಾತ್ರ ನಮಗೆ ಅತಿ ಶ್ರೇಷ್ಠವಾದ ಕೆಲಸವನ್ನು ಮಾಡಲು ಸಾಧ್ಯವಾಗುತ್ತದೆ. ನಾನು ನಿಮ್ಮನ್ನೆಲ್ಲಾ ಕೇಳುತ್ತೇನೆ—ನಿಮ್ಮ ಕೈಗೆ ಒಂದು ಸಣ್ಣ ಮಗುವನ್ನು ಕೊಟ್ಟರೆ ನೀವು ಹೇಗೆ ವರ್ತಿಸುತ್ತೀರಿ? ತತ್ಕಾಲಕ್ಕೆ ನಿಮ್ಮ ಇಡೀ ಜೀವನ ಬದಲಾಯಿಸುವುದು. ನೀವು ಏನಾದರೂ ಆಗಿರಿ. ತಾತ್ಕಾಲಿಕವಾಗಿಯಾದರೂ ನೀವು ನಿಃಸ್ವಾರ್ಥಿಗಳಾಗಬೇಕು. ಜವಾಬ್ದಾರಿ ನಿಮ್ಮನ್ನು ಬದಲಾಯಿಸುವುದು. ನಾವೇ ಎಲ್ಲಕ್ಕೂ ಎಂದು ಹೊಣೆಗಾರರಾಗುವೆವೊ ಆಗ ನಮ್ಮ ಅತಿ ಶ್ರೇಷ್ಠ ಶೀಲ ವ್ಯಕ್ತವಾಗುವುದು. ನಾವು ಮತ್ತಾರನ್ನೂ ಸೆಳೆಯದೆ ಇರುವಾಗ, ದೂರುವುದಕ್ಕೆ ಯಾವ ದೆವ್ವವೂ ಇಲ್ಲದೆ ಇರುವಾಗ, ನಾವೇ ಎಲ್ಲಕ್ಕೂ ಹೊಣೆಗಾರರಾದಾಗ, ನಾವು ನಮ್ಮ ಶೀಲದ ಭವ್ಯ ಶಿಖರಕ್ಕೆ ಏರುವೆವು. ನನ್ನ ಅದೃಷ್ಟಕ್ಕೆ ನಾನೇ ಹೊಣೆ." (ವ್ಯಕ್ತಿತ್ವ ನಿರ್ಮಾಣ, ಪು. ೪೦).

## ನೈಜವ್ಯಕ್ತಿತ್ವ

ಸ್ವತಂತ್ರ "ವ್ಯಕ್ತಿ"ಯಾಗಿ ವ್ಯಕ್ತಿಯು ತನ್ನಲ್ಲಿ ತಾನು ನೆಲೆ ನಿಲ್ಲಬೇಕಾದರೆ ಅವನಿಗೆ ತನ್ನ ನೈಜ ವ್ಯಕ್ತಿತ್ವದ ಅರಿವಾಗಬೇಕು. ಅವನ ನೈಜ ವ್ಯಕ್ತಿತ್ವ ಎಲ್ಲ ಜೀವಿಗಳ ಅಂತರಾಳದಲ್ಲಿರುವ ದಿವ್ಯತೆ.

ಘೃತಮಿವ ಪಯಸಿ ನಿಗೂಢಂ
ಭೂತೇ ಭೂತೇ ವಸತಿ ವಿಜ್ಞಾನಮ್ |
ಸತತಂ ಮಂಥಯಿತವ್ಯಂ
ಮನಸಾ ಮಂಥಾನಭೂತೇನ ||
(ಅಮೃತಬಿಂದೂಪನಿಷತ್, ೨೦)

"ಹಾಲಿನಲ್ಲಿ ತುಪ್ಪವು ಅಡಗಿರುವಂತೆ ಪ್ರತಿಯೊಂದು ಜೀವಿಯಲ್ಲಿಯೂ ಚೈತನ್ಯಶಕ್ತಿ ಅಡಗಿದೆ. ಮನಸ್ಸೆಂಬ ಕಡೆಗೋಲಿನಿಂದ (ಈ ವ್ಯಕ್ತಿತ್ವವನ್ನು) ಸತತವೂ ಕಡೆಯುತ್ತಿರಬೇಕು." (ಆಗ ಆಂತರಿಕ ದಿವ್ಯತೆಯು ಅಭಿವ್ಯಕ್ತವಾಗುತ್ತದೆ.) ಈ ದಿವ್ಯತೆಯ ಪೂರ್ಣ ಅಭಿವ್ಯಕ್ತಿಯೇ ಮುಕ್ತಾವಸ್ಥೆ. ಆಗ ವ್ಯಕ್ತಿ ಪರಿಪೂರ್ಣನಾಗಿ ಆತ್ಮತೃಪ್ತನಾಗಿ ತನ್ನಲ್ಲಿಯೇ ತಾನು ನೆಲೆ ನಿಂತು ನೈಜ ಸ್ವಾತಂತ್ರ್ಯವನ್ನು ಪಡೆಯುವನು.

> ತನಗೆ ತಾನೇ ಒಡೆಯನಾಗಿರದ ಯಾವ ವ್ಯಕ್ತಿಯನ್ನೂ ಸ್ವತಂತ್ರ ಎಂದು ಕರೆಯಲಾಗುವುದಿಲ್ಲ.
> — ಎಪಿಕ್ಟಟಸ್ (Epictetus)

ಧರ್ಮ ಮನುಷ್ಯನನ್ನು ಹಂತಹಂತವಾಗಿ ಆತ್ಯಂತಿಕ ಮುಕ್ತಿ ಅಥವಾ ಸ್ವಾತಂತ್ರ್ಯದೆಡೆಗೆ ಒಯ್ಯುವುದು. ನಾವು ಮುಕ್ತಿ ಅಥವಾ ಮೋಕ್ಷವನ್ನು ಪರಮ ಪುರುಷಾರ್ಥ ಎಂದು ಕರೆಯುತ್ತೇವೆ. ಈ ಸ್ಥಿತಿಯನ್ನು ಮುಟ್ಟಲು ಕಾಮ, ಅರ್ಥ ಮತ್ತು ಧರ್ಮ ಎಂಬ ಕೆಳಗಿನ ಪುರುಷಾರ್ಥಗಳನ್ನು ಪೂರ್ತಿಗೊಳಿಸಬೇಕು. ಈ ಎಲ್ಲ ಪುರುಷಾರ್ಥಗಳ ಹಿಂದೆಯೂ ಮುಕ್ತಿಯ ಭಾವನೆ ಅಡಕವಾಗಿದೆ.

## ಸ್ವಾತಂತ್ರ್ಯದ ವಿವಿಧ ಹಂತಗಳು

ಮೊದಲನೆಯದಾಗಿ ಕಾಮ—ಇಂದ್ರಿಯಗಳ ಮೂಲಕ ಪ್ರಾಪಂಚಿಕ ಸುಖಗಳನ್ನು ಅನುಭವಿಸುವುದು. ಆದರೆ ಯಾವುದೇ ಸುಖವನ್ನು ಅನುಭವಿಸಬೇಕಾದರೂ ಮನುಷ್ಯನಿಗೆ ಸ್ವಾತಂತ್ರ್ಯ ಬೇಕು. ಎಂಥ ರಾಜಭೋಗವಿದ್ದರೂ ಜೈಲಿನಲ್ಲಿರುವ ವ್ಯಕ್ತಿ ಸುಖದಿಂದಿರಲಾರ. ಒಂದು ಪಕ್ಷಿಯೂ ಕೂಡ ಹೊರಗಡೆ ಹಾರಾಡಿಕೊಂಡಿರುವಾಗ ಇರುವಷ್ಟು ಪಂಜರದಲ್ಲಿ ಮೃಷ್ಟಾನ್ನವನ್ನು ಉಂಡು ಸುಖವಾಗಿರಲಾರದು. ಬಡತನದಲ್ಲಿ ಕಷ್ಟವನ್ನು ಅನುಭವಿಸಿದರೂ ಪರವಾಗಿಲ್ಲ ಸ್ವತಂತ್ರ ಜೀವನವನ್ನು ನಡೆಸಬೇಕೆಂದು ಸಾಮಾನ್ಯವಾಗಿ ಜನ ಭಾವಿಸುತ್ತಾರೆ. ಪರತಂತ್ರ ಜೀವನದಲ್ಲೇ ತೃಪ್ತಿಯನ್ನು ಕಾಣುವವನು ದಾಸ್ಯ ಮನೋಭಾವದವನು—ಅವನಲ್ಲಿನ್ನೂ ಸಾಕಷ್ಟು ವ್ಯಕ್ತಿವಿಕಾಸವಾಗಿಲ್ಲ.

ಕೇವಲ ಭೌತಿಕ ಸ್ವಾತಂತ್ರ್ಯ ಮಾತ್ರವಲ್ಲದೆ ಆಂತರಿಕ ಸ್ವಾತಂತ್ರ್ಯವೂ ಸುಖಾನುಭವಕ್ಕೆ ಆವಶ್ಯಕ. ಮನುಷ್ಯ ಚಿಂತೆ, ಭಯ, ಅಭದ್ರತೆಗಳಿಂದ ಕೂಡಿದ್ದರೆ ಅವನು ನಿಜವಾಗಿಯೂ ಪ್ರಾಪಂಚಿಕ ಸುಖವನ್ನು ಅನುಭವಿಸಲಾರ. ಎಲ್ಲ ತಾಪತ್ರಯಗಳಿಂದ ಮುಕ್ತನಾಗಿದ್ದರೆ ಮಾತ್ರ ಸುಖವನ್ನು ಅನುಭವಿಸಬಲ್ಲ. ಅವನು ಸುಖವನ್ನು ಅನುಭವಿಸಲು ಸಮಾಜದಲ್ಲಿ ಅವನಿಗೆ ಸುಭದ್ರತೆ (security) ಬೇಕು ಮತ್ತು ಅವನು ಸಾಕಷ್ಟು ಸ್ವಾವಲಂಬಿಯಾಗಿರಬೇಕು.

## ವಿಚಾರ ಸ್ವಾತಂತ್ರ್ಯ

ಇಷ್ಟೇ ಅಲ್ಲದೆ ಮನುಷ್ಯನಿಗೆ ವಿಚಾರ ಸ್ವಾತಂತ್ರ್ಯವೂ ಬೇಕು.

ಸಾಮಾನ್ಯವಾಗಿ ಜನ ಬಯಸುವುದು ವಾಕ್‌ಸ್ವಾತಂತ್ರ್ಯವನ್ನು, ವಿಚಾರ ಸ್ವಾತಂತ್ರ್ಯವನ್ನಲ್ಲ. ಮುಕ್ತವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶವಿರಬೇಕು. ಆದರೆ ಅವರ ಅಭಿಪ್ರಾಯಗಳೇ ಸ್ವತಂತ್ರವಾಗಿರುವುದಿಲ್ಲ—ಹಲವಾರು ಪ್ರಭಾವಗಳ ಪರಿಣಾಮವಾಗಿರುತ್ತವೆ. ತಾನೇ ಸ್ವತಂತ್ರವಾಗಿ ವಿಚಾರಮಾಡಿ ತನ್ನದೇ ಆದ ಅಭಿಪ್ರಾಯವನ್ನು ರೂಪಿಸುವ ಸಾಮರ್ಥ್ಯ ಎಲ್ಲರಿಗೂ ಇರುವುದಿಲ್ಲ. ಅನೇಕರು ಎಷ್ಟೊ ಪೂರ್ವಗ್ರಹಗಳಿಗೆ ದಾಸರಾಗಿರುತ್ತಾರೆ—ಮುಕ್ತ ಮನಸ್ಸಿನಿಂದ ವಿಚಾರ ಜಗತ್ತಿನಲ್ಲಿ ವಿಹರಿಸಲಾರರು. ಆದ್ದರಿಂದ ವೈಚಾರಿಕ ಸುಖವನ್ನು ಅನುಭವಿಸುವುದಕ್ಕೂ ವಿಚಾರಸ್ವಾತಂತ್ರ್ಯ ಬೇಕು. ವೈಚಾರಿಕ ಗುಲಾಮಗಿರಿಯನ್ನು, ಅಂಧಾನುಕರಣೆಯನ್ನು ಸ್ವಾಮಿ ವಿವೇಕಾನಂದರು ಕಟುವಾಗಿ ಟೀಕಿಸುತ್ತಿದ್ದರು. ಅವರು ಹೇಳುತ್ತಿದ್ದರು: "ಅನುಕರಣೆ ನಾಗರಿಕತೆಯಲ್ಲ. ಅನುಕರಣೆ, ಹೇಡಿಯಂತೆ ಅನುಕರಿಸುವುದು ಎಂದೂ ಪ್ರಗತಿಗೆ ಸಾಧಕವಲ್ಲ. ಭಯಾನಕ ಹೀನಮಟ್ಟದ ಚಿಹ್ನೆ ಅದು. ನಿಜವಾಗಿಯೂ ನಾವು ಇತರರಿಂದ ಕಲಿಯಬೇಕಾದುದು ಎಷ್ಟೊ ಇದೆ. ಕಲಿಯಲು ಒಪ್ಪದವನು ಸತ್ತಂತೆ. ಒಳಿತಾದುದೆಲ್ಲವನ್ನೂ ಇತರರಿಂದ ಕಲಿಯಬೇಕು. ಆದರೆ ನಿಮ್ಮದೇ ಆದ ರೀತಿಯಲ್ಲಿ ಅದನ್ನು ಸ್ವೀಕರಿಸಿ ಅರಗಿಸಿಕೊಳ್ಳಿ, ಇತರರಾಗಬೇಡಿ"

(ವ್ಯಕ್ತಿತ್ವ ನಿರ್ಮಾಣ, ಪು.೭೦)

**ಮಾನವನ ಚಿಂತನೆ ಅವನದಲ್ಲ. ಅದು ಅವನು ಯಾವ ಸಾಮಾಜಿಕ ವರ್ಗದ ಭಾಗಿಯಾಗಿರುವನೊ ಅದರ ಪ್ರತಿಫಲ.**

— ವಿಲ್ ಡ್ಯೂರಾಂಟ್ (Will Durant.)

ಪ್ರಪಂಚದ ಸುಖವನ್ನು ಅನುಭವಿಸುವುದಕ್ಕೆ ನಮಗೆ ಒಂದು ರೀತಿಯ ಸ್ವಾತಂತ್ರ್ಯ ಬೇಕು ಎಂದಾಯಿತು. ಈ ಸ್ವಾತಂತ್ರ್ಯ ಯಾವುದರಿಂದ ಲಭಿಸುವುದು? ಈಗ ಮುಂದಿನ ಪುರುಷಾರ್ಥವಾದ ಅರ್ಥದ ವಿಷಯಕ್ಕೆ ಬರುತ್ತೇವೆ. ಇಲ್ಲಿ ಅರ್ಥವೆಂದರೆ ಕೇವಲ ಹಣವೆಂದಲ್ಲ—ಮನುಷ್ಯನಿಗೆ ಸಮಾಜದಲ್ಲಿ ಒಂದು ಸುಭದ್ರತೆಯನ್ನು ನೀಡುವ ಸಾಧನ. ಅದು ಹಣವಾಗಿರಬಹುದು, ಹುದ್ದೆಯಾಗಿರಬಹುದು, ಅಧಿಕಾರವಾಗಿರಬಹುದು, ಒಳ್ಳೆಯ ಉದ್ಯೋಗವಾಗಿರಬಹುದು, ಅಥವಾ ಇನ್ನಾವುದೇ ಸಮಾಜದ ಸ್ಥಾನಮಾನಗಳಾಗಿರಬಹುದು. ಇವೆಲ್ಲವೂ, ಸರಿಯಾಗಿ ಬಳಸಿಕೊಂಡರೆ, ಮನುಷ್ಯನಿಗೆ ಸಮಾಜದಲ್ಲಿ ಒಂದು ಸುಭದ್ರತೆಯನ್ನು ನೀಡಿ, ಅವನು ಅದರ ಸುಖವನ್ನು ಮುಕ್ತ ಮನಸ್ಸಿನಿಂದ ಅನುಭವಿಸಲು ಸಹಾಯಕವಾಗುವುವು.

## ನೈತಿಕ ಪರಿಪೂರ್ಣತೆ

ಈಗ ಮನುಷ್ಯನಿಗೆ ಪ್ರಾಪಂಚಿಕ ಸುಖವಿದೆ, ಮತ್ತು ಆರ್ಥಿಕ ಸುಭದ್ರತೆಯಿದೆ. ಆದರೂ ಅವನು ಸಂಪೂರ್ಣ ಸ್ವತಂತ್ರನಲ್ಲ. ಅವನು ಈ ಸುಖಗಳಿಗೆ, ಹಣ ಕೀರ್ತಿ ಅಧಿಕಾರ ಸ್ಥಾನಮಾನಗಳಿಗೆ ದಾಸನಾಗಬಹುದು. ಅವುಗಳ ವ್ಯಾಮೋಹದಿಂದ ಅವುಗಳನ್ನು ಪಡೆಯಲು ಮತ್ತು ಉಳಿಸಿಕೊಳ್ಳಲು ಅವನು ಎಂಥ ಅನೈತಿಕ ಮಾರ್ಗವನ್ನೂ ಹಿಡಿಯುವ ಸಂಭವವಿದೆ. ವ್ಯಾಮೋಹದಿಂದಲೇ ದ್ವೇಷ ಅಸೂಯಾದಿ ಕ್ಲೇಶಗಳು ಉಂಟಾಗುವುವು. ಮತ್ತೆ ರಾಗ-ದ್ವೇಷಾದಿಗಳೇ ಎಲ್ಲ ಅನೈತಿಕತೆಗೂ ತಳಹದಿ. ಹೀಗೆ ಮನುಷ್ಯ ತನ್ನ ನೈತಿಕ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾನೆ. ಇದನ್ನು ತಡೆಯುವುದಕ್ಕಾಗಿಯೇ ಮೂರನೆಯ ಪುರುಷಾರ್ಥವಿರುವುದು. ಇಲ್ಲಿ ಧರ್ಮವೆಂದರೆ ನೈತಿಕ ಪರಿಪೂರ್ಣತೆ. ಧರ್ಮದಲ್ಲಿ ಎರಡು ಅಂಗಗಳಿವೆ—ಒಂದು ಸಾಧಾರಣ ಧರ್ಮ, ಇನ್ನೊಂದು ವಿಶೇಷ ಧರ್ಮ. ಸಾಧಾರಣ ಧರ್ಮವೆಂದರೆ ಸಾರ್ವಕಾಲಿಕವಾದ, ಸರ್ವರಿಗೂ ಅನ್ವಯಿಸುವ ಸತ್ಯ, ಅಹಿಂಸೆ, ಅಸ್ತೇಯ, ಪ್ರಾಮಾಣಿಕತೆ, ಪ್ರೀತಿ, ದಯೆ ಇವೇ ಮುಂತಾದ ನೈತಿಕ ಗುಣಗಳು. ಮನುಷ್ಯ ಸಮಾಜದಲ್ಲಿ ತನ್ನ ಸ್ಥಾನ ಮತ್ತು ಮನೋಧರ್ಮಕ್ಕನುಗುಣವಾಗಿ ಅನುಸರಿಸಬೇಕಾದ ನೀತಿನಿಯಮಗಳು ಮತ್ತು ಕರ್ತವ್ಯಗಳು ವಿಶೇಷ ಧರ್ಮ. ಇದನ್ನೇ ವರ್ಣಾಶ್ರಮ ಧರ್ಮವೆಂದು ಕರೆಯುತ್ತಾರೆ. ಇವುಗಳಲ್ಲಿ ಮೊದಲನೆಯದು ವೈಯಕ್ತಿಕ ಪ್ರಜ್ಞೆಯನ್ನೂ, ಎರಡನೆಯದು ಸಾಮೂಹಿಕ ಪ್ರಜ್ಞೆಯನ್ನೂ ಅವಲಂಬಿಸಿದೆ. ಇವೆರಡೂ ವ್ಯಕ್ತಿಯಲ್ಲಿ ಆತ್ಮ-ನಿಗ್ರಹವನ್ನು ಬಲಪಡಿಸಿ ಅವನನ್ನು ತನ್ನ ಕೀಳು ಪ್ರವೃತ್ತಿಗಳಿಂದ ಮುಕ್ತಗೊಳಿಸುವುವು.

## ಮೋಕ್ಷ

ಆದರೆ ಮನುಷ್ಯನಿಗೆ ಈ ಧರ್ಮವೇ ಒಂದು ಬಂಧನವಾಗುವುದು. ವೈಯಕ್ತಿಕ ನೀತಿ ನಿಯಮಗಳು, ಸಾಮಾಜಿಕ ಕಟ್ಟು ಕಟ್ಟಳೆಗಳು, ಜೀವನದ ಹಲವಾರು ಕರ್ತವ್ಯಗಳು—ಇವೆಲ್ಲ ದೊಡ್ಡ ಸರಪಳಿಯಾಗಿ ವ್ಯಕ್ತಿಯನ್ನು ಬಂಧಿಸುವುವು. ಕೀಳು ಪ್ರವೃತ್ತಿಗಳ ಬಂಧನಕ್ಕಿಂತ ಇದು ಉನ್ನತವಾದರೂ ಆತ್ಯಂತಿಕ ಮುಕ್ತಿಗೆ ಹೋಲಿಸಿದರೆ ಇದೂ ಬಂಧನವೇ—ಚಿನ್ನದ ಸರಪಳಿಯೂ ಶೃಂಖಲೆಯೇ. ಈಗ ಒಳಗಿನಿಂದ ಮತ್ತೆ ಸ್ವಾತಂತ್ರ್ಯದ ಕರೆ ಕೇಳಿಸುವುದು. ಎಲ್ಲ ಬಂಧನಗಳನ್ನೂ ಕಿತ್ತೊಗೆದು, ಪಾಪ-ಪುಣ್ಯಗಳೆರಡನ್ನೂ ಮೀರಿಹೋಗಿ ಮುಕ್ತ ಪುರುಷನಾಗಿ ದಿವ್ಯಾನಂದದಲ್ಲಿ ವಿಹರಿಸಬೇಕೆನಿಸುವುದು ಅವನಿಗೆ. ಇದೇ ಪರಮಪುರುಷಾರ್ಥವಾದ ಮೋಕ್ಷ.

ಧರ್ಮ-ಅಧರ್ಮ, ಪಾಪ-ಪುಣ್ಯ, ಗುಣ-ದೋಷ, ಒಳಿತು-ಕೆಡುಕು—ಈ ಎಲ್ಲ ದ್ವಂದ್ವಗಳನ್ನೂ ಮೀರಿಹೋಗುವುದೇ ಮೋಕ್ಷ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: 'ಮುಕ್ತಿಯೇ ನನ್ನ ಧರ್ಮ. ಅದನ್ನು ತಡೆಯುವ ಯಾವುದನ್ನೇ ಆಗಲಿ ನಾನು ದೂರವಿರಿಸುತ್ತೇನೆ.' ಭಾಗವತದಲ್ಲಿ ಒಂದು ಮಾತು ಬರುತ್ತದೆ—**ಗುಣದೋಷ ದೃಷ್ಟಿರ್ದೋಷಃ ಗುಣಸ್ತು ತದುಭಯವರ್ಜಿತಃ** ‖ — "ಇದು ಗುಣ, ಇದು ದೋಷ ಎಂದು ಪ್ರತ್ಯೇಕವಾಗಿ ನೋಡುವುದೇ ದೋಷ; ಇವೆರಡೂ ಇಲ್ಲದಿರುವುದೇ ಗುಣ." ಈ ಎಲ್ಲ ದ್ವಂದ್ವಗಳಿರುವವರೆಗೂ ಮನುಷ್ಯ ನಾನಿದನ್ನು ಮಾಡಬೇಕು, ಇದನ್ನು ಮಾಡಬಾರದು; ಇದನ್ನು ಹೇಳಬೇಕು, ಇದನ್ನು ಹೇಳಬಾರದು; ಇದನ್ನು ಯೋಚಿಸ ಬೇಕು, ಇದನ್ನು ಯೋಚಿಸಬಾರದು ಇತ್ಯಾದಿ ನಿಯಮಗಳಿಂದ ಬದ್ಧನಾಗಿರುತ್ತಾನೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಹೇಳುತ್ತಾನೆ —**ಕಿಂ ಕರ್ಮ ಕಿಮಕರ್ಮೇತಿ ಕವಯೋಽಪ್ಯತ್ರ ಮೋಹಿತಾಃ** ‖—

"ಯಾವುದು ಮಾಡಬೇಕಾದುದು, ಯಾವುದು ಮಾಡಬಾರದುದು ಎಂಬ ವಿಷಯದಲ್ಲಿ ಜ್ಞಾನಿಗಳೂ ಕೂಡ ಗೊಂದಲಕ್ಕೀಡಾಗುತ್ತಾರೆ." ಎಲ್ಲಿಯವರೆಗೆ ಮನುಷ್ಯ ನೈತಿಕಮಟ್ಟದಲ್ಲಿ ಉಳಿಯುತ್ತಾನೊ ಅವನಿಗೆ ಈ ಗೊಂದಲ ತಪ್ಪಿದ್ದಲ್ಲ—ಈ ಧರ್ಮಚಕ್ರದಲ್ಲಿ ತಿರುಗುತ್ತಿರಬೇಕು. ಸಂಸಾರಚಕ್ರದಿಂದ ತಪ್ಪಿಸಿಕೊಳ್ಳಲು ಧರ್ಮಚಕ್ರವನ್ನು ಹಿಡಿಯುತ್ತಾನೆ: ಈ ಚಕ್ರದಿಂದಲೂ ಬಿಡುಗಡೆ ಹೊಂದಲು ಅವನು ಆತ್ಮ-ಸಾಕ್ಷಾತ್ಕಾರವನ್ನು ಪಡೆಯಬೇಕು. ಆಗಲೇ ಅವನಿಗೆ ಸಂಪೂರ್ಣಮುಕ್ತಿ. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಹೀಗೆ ಹೇಳಿದೆ: **ಅತಃ ಪಾಪಮಕರವಮಿತಿ, ಅತಃ ಪುಣ್ಯಮಕರವಮಿತಿ; ಉಭೇ ಉ ಹೈವೈಷ ಏತೇ ತರತಿ, ನೈನಂ ಕೃತಾಕೃತೇ ತಪತಃ||**—"ಪಾಪವನ್ನು ಮಾಡಿದೆನು, ಪುಣ್ಯವನ್ನು ಮಾಡಿದೆನು ಎಂಬ ಎರಡೂ ಚಿಂತೆಗಳು ಆತ್ಮಜ್ಞಾನಿಯನ್ನು ವ್ಯಾಕುಲಗೊಳಿಸುವುದಿಲ್ಲ. ಇವನು ಇವೆರಡನ್ನೂ ದಾಟುತ್ತಾನೆ. ಮಾಡಿದ್ದು ಮತ್ತು ಮಾಡದಿರುವುದು ಇವನನ್ನು ತಪಿಸುವುದಿಲ್ಲ." (ಬೃಹದಾರಣ್ಯಕ ಉಪನಿಷತ್ ೪.೪.೨೨)

## ಮುಕ್ತಿಯೇ ನಮ್ಮ ಸ್ವಭಾವ

ಆತ್ಮನ ಸ್ವರೂಪವೇ ಮುಕ್ತಿ. ಈ ಮುಕ್ತಸ್ವಭಾವವೇ ಮನುಷ್ಯನನ್ನು ಒಳಗಿನಿಂದ ಪ್ರಚೋದಿಸಿ ಅವನನ್ನು ಸ್ವಾತಂತ್ರ್ಯಕ್ಕಾಗಿ ಹೋರಾಡುವಂತೆ ಮಾಡುವುದು ಮತ್ತು ಅವನನ್ನು ಹಂತಹಂತವಾಗಿ ಮುಕ್ತಿಯನ್ನು ಪಡೆದು ಕೊನೆಗೆ ಆತ್ಯಂತಿಕ ಮುಕ್ತಿಯನ್ನು ಪಡೆಯುವವರೆಗೆ ನಡೆಸಿಕೊಂಡು ಹೋಗುವುದು. ತನ್ನಾತ್ಮದ ಸ್ವರೂಪವನ್ನು ಅನುಭವದ ಮೂಲಕ ತಿಳಿದಮೇಲೆಯೇ ಸಂಪೂರ್ಣ ಮುಕ್ತಿ. ಆಗವನು ಎಲ್ಲೇ ಇದ್ದರೂ ಮುಕ್ತನಾಗಿರುತ್ತಾನೆ. ಆಗವನಿಗೆ ಸೆರೆಮನೆಯೂ ಒಂದೆ, ಅರಮನೆಯೂ ಒಂದೆ. ಬಾಹ್ಯ ಬಂಧನಗಳಾವವೂ ಅವನಿಗೆ ಬಂಧನವೇ ಅಲ್ಲ. ಮತ್ತೆ ಯಾವ ಕರ್ತವ್ಯವೂ ಅವನನ್ನು ಕಟ್ಟಿಹಾಕಲಾರದು. ಶ್ರೀಕೃಷ್ಣ ಹೇಳುತ್ತಾನೆ—**ಯಸ್ತ್ವಾತ್ಮರತಿರೇವ ಸ್ಯಾತ್ ಆತ್ಮತೃಪ್ತಶ್ಚ ಮಾನವಃ | ಆತ್ಮನ್ಯೇವ ಚ ಸಂತುಷ್ಟಃ ತಸ್ಯ ಕಾರ್ಯಂ ನ ವಿದ್ಯತೇ||** —"ಆತ್ಮನಲ್ಲಿಯೇ ರಮಿಸುವವನಿಗೆ, ಆತ್ಮನಲ್ಲಿಯೇ ಸಂತುಷ್ಟನಾದವನಿಗೆ ಮಾಡಬೇಕಾದ ಕೆಲಸ ಯಾವುದೂ ಇರುವುದಿಲ್ಲ." (ಗೀತೆ, ೩.೧೭)

ಅವನು ಕರ್ಮವನ್ನು ಮಾಡಿದರೂ ಅವನಿಗೆ ಬಂಧನವಾಗುವುದಿಲ್ಲ, ಯಾವ ಕರ್ಮದ ಫಲವೂ ಅವನನ್ನು ಬಂಧಿಸದು. ಭಗವದ್ಗೀತೆ ಹೇಳುವಂತೆ—**ಹತ್ವಾಪಿ ನ ನಿಬಧ್ಯತೇ**—ಕೊಂದರೂ ಅವನು ಅದರ ಪಾಪಕ್ಕೆ ಒಳಗಾಗುವುದಿಲ್ಲ. ಏಕೆಂದರೆ ಆತ್ಮಕ್ಕೆ ಯಾವ ಕರ್ಮದ ಸೋಂಕೂ ಇಲ್ಲ. ಬೃಹದಾರಣ್ಯಕ ಉಪನಿಷತ್ತು ಹೇಳುತ್ತದೆ: **ಸ ನ ಸಾಧುನಾ ಕರ್ಮಣಾ ಭೂಯಾನ್ ನೋ ಏವಾಸಾಧುನಾ ಕನೀಯಾನ್**—"ಆತ್ಮನು ಸಾಧು ಕರ್ಮದಿಂದ ವರ್ಧಿಸುವುದೂ ಇಲ್ಲ, ಅಸಾಧು ಕರ್ಮದಿಂದ ಅಲ್ಪನಾಗುವುದೂ ಇಲ್ಲ." (ಬೃಹದಾರಣ್ಯಕ ಉಪನಿಷತ್ ೪.೪.೨೨)

> **ಮಾತನಾಡುವ ಗಿಳಿ ಪಂಜರದಲ್ಲಿರುತ್ತದೆ.**
> **ಮಾತು ಬಾರದ ಪಕ್ಷಿ ಹಾರಾಡುತ್ತಿರುತ್ತದೆ.**
> — ಟಿಬೆಟನ್ ಗಾದೆ

ಅಂದರೆ ಮುಕ್ತಪುರುಷನು ಮನಬಂದಂತೆ ವರ್ತಿಸುವನೆಂದಾಗಲಿ, ಅನೈತಿಕ ಕರ್ಮವನ್ನೂ ಮಾಡಬಹುದೆಂದಾಗಲಿ ಅರ್ಥವಲ್ಲ. ಅವನು ಸಂಪೂರ್ಣ ಆತ್ಮನಿಗ್ರಹವುಳ್ಳವನಾದುದರಿಂದ ಅವನ ವಿಷಯದಲ್ಲಿ ಮನಬಂದಂತೆ ವರ್ತಿಸುವ ಪ್ರಶ್ನೆಯೇ ಬರುವುದಿಲ್ಲ. ಮತ್ತೆ ಅವನು ಯಾವ ಪ್ರಲೋಭನೆಗೂ ಅಥವಾ ದೌರ್ಬಲ್ಯಕ್ಕೂ ಒಳಗಾಗದೆ ಇರುವುದರಿಂದ ಅನೈತಿಕ ಕರ್ಮವನ್ನು ಮಾಡುವ ಅವಕಾಶವೇ ಅವನಿಗೆ ಬರುವುದಿಲ್ಲ. ಮನುಷ್ಯ ಅನೈತಿಕ ಮಾರ್ಗ ಹಿಡಿಯುವುದು ದೌರ್ಬಲ್ಯವಶದಿಂದ, ಯಾವುದಾದರೂ ಪ್ರಲೋಭನೆಗೆ ಒಳಗಾದಾಗ. ಜನಸಾಮಾನ್ಯರು ಪ್ರಯತ್ನಪೂರ್ವಕವಾಗಿ ನೀತಿಮಾರ್ಗವನ್ನು ಅನುಸರಿಸಿದರೆ ಮುಕ್ತಪುರುಷನಿಗೆ ನೈತಿಕ ಗುಣಗಳು ಸ್ವಾಭಾವಿಕವಾಗಿರುತ್ತವೆ. ಅವನಿಗವು ಆಭರಣಪ್ರಾಯವಾಗಿ ಅವನ ಸ್ವಭಾವದೊಡನೆ ಒಂದಾಗಿರುತ್ತವೆ. ಶ್ರೀರಾಮಕೃಷ್ಣರು ಹೇಳುವಂತೆ ನುರಿತ ನರ್ತಕನು ತಪ್ಪು ಹೆಜ್ಜೆ ಹಾಕುವುದೇ ಇಲ್ಲ, ಲಯಬದ್ಧವಾಗಿ ನರ್ತಿಸುವುದು ಅವನ ಸ್ವಭಾವವಾಗಿಬಿಟ್ಟಿರುತ್ತದೆ. ಹಾಗೆಯೇ ಪ್ರೀತಿ, ಸಹಾನುಭೂತಿ, ದಯೆ ಮುಂತಾದ ಗುಣಗಳು ಅವನಿಂದ ತಾವೇ ತಾವಾಗಿ ಹೊರಸೂಸುತ್ತವೆ. ಏಕೆಂದರೆ ಈ ಎಲ್ಲ ಸದ್ಗುಣಗಳೂ ದಿವ್ಯತೆಯ ಅಭಿವ್ಯಕ್ತಿ, ಇವೆಲ್ಲವೂ ಆಧ್ಯಾತ್ಮಿಕ ಮೂಲದಿಂದಲೇ ಹೊರಹೊಮ್ಮುತ್ತವೆ. ಇವುಗಳ ಮೂಲವನ್ನು ನಾವು ಭೌತವಸ್ತುವಿನಲ್ಲಿ ಅರಸಲಾಗುವುದಿಲ್ಲ. ಮನಸ್ಸೂ ಭೌತವಸ್ತುವಿನ ಸೂಕ್ಷ್ಮಾವಸ್ಥೆಯಾದುದರಿಂದ ಮನೋಮಯ ಹಂತದಲ್ಲಿಯೂ ಈ ಗುಣಗಳು ಸ್ವಭಾವಸಿದ್ಧವಾಗುವುದಿಲ್ಲ. ಆದ್ದರಿಂದ ಆಧ್ಯಾತ್ಮಿಕ ಹಂತದಲ್ಲಿ ಮಾತ್ರ ಇವು ಸ್ವಭಾವಸಿದ್ಧವಾಗುತ್ತವೆ. ಆಗಲೇ ಒಬ್ಬ ವ್ಯಕ್ತಿಯನ್ನು ನಿಜವಾಗಿಯೂ ಸ್ವತಂತ್ರ ಎಂದು ಕರೆಯಬಹುದು. ✻

### ಮೂಗಿನವರೆಗೆ ಮಾತ್ರ .....

ಸ್ವಾತಂತ್ರ್ಯವೆಂದರೆ ಸ್ವಚ್ಛಂದವೃತ್ತಿಯಲ್ಲ. ಒಬ್ಬನ ಸ್ವಾತಂತ್ರ್ಯ ಇನ್ನೊಬ್ಬನ ಸ್ವಾತಂತ್ರ್ಯಕ್ಕೆ ಅಡ್ಡಿಬರಬಾರದು. ಒಬ್ಬನು ರಸ್ತೆಯಲ್ಲಿ ದೊಣ್ಣೆ ತಿರುಗಿಸಿಕೊಂಡು ಹೋಗುತ್ತಿದ್ದನು. ಅದು ಇನ್ನೊಬ್ಬನ ಮೂಗಿಗೆ ತಾಗಿತು. ಅವನು ಕೋಪದಿಂದ ಗದರಿಸಿದನು. ದೊಣ್ಣೆ ತಿರುಗಿಸುವವನು, 'ನಾನು ಸ್ವತಂತ್ರ, ನನಗಿಷ್ಟ ಬಂದಂತೆ ಮಾಡುವ ಹಕ್ಕಿದೆ'ಎಂದನು. ಮೂಗಿಗೆ ಹೊಡೆಸಿಕೊಂಡವನು: **'Your freedom ends, where my nose begins'** (ನನ್ನ ಮೂಗಿನವರೆಗೆ ಮಾತ್ರ ನಿನ್ನ ಸ್ವಾತಂತ್ರ್ಯ) ಎಂದನು.